ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.
E-Mail Id:icps.kar@gmail.com Ph:080-22879381/82/83

ಸಂಖ್ಯೆ:ಕೆ.ಎಸ್.ಐ.ಸಿ.ಪಿ.ಎಸ್/ಮರ/ಮೂ.ಸೌ-24/2018-19 ದಿನಾಂಕ:27-07-2020

ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.

ಮಾನ್ಯರೆ,

ವಿಷಯ: ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕಟ್ಟಡ/ಆವರಣದಲ್ಲಿ CCTV ಅಳವಡಿಸಿ, ಅಧಿಕೃತ ಸಿಬ್ಬಂದಿಯಿಂದ ನಿರ್ವಹಣೆ ಮಾಡುವ ಕುರಿತು.

ಉಲ್ಲೇಖ: ಕರಾಸಮರಸೊ/ಆಡಳಿತ/ಮರ/ಮೂ.ಸೌ-24/2018-19 ದಿನಾಂಕ:17-08-2019.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದತ್ತ ಗಮನ ಸೆಳೆಯಲಾಗಿದೆ. ಪತ್ರದಲ್ಲಿ ಬಾಲಮಂದಿರ/ವೀಕ್ಷಣಾಲಯ ಸಂಸ್ಥೆಗಳಲ್ಲಿ CCTV ಗಳನ್ನು ಅಳವಡಿಸಿ, ಪ್ರತಿ ದಿನ ಸಂಸ್ಥೆಯ ಅಧೀಕ್ಷಕರು CCTV Footageನ್ನು ಪರಿಶೀಲಿಸುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು CCTV Footage ಅಧಿಕೃತ ಸಿಬ್ಬಂದಿಯಿಂದ ನಿರ್ವಹಣೆ ಮಾಡಲು ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ವರದಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸಲು ಸೂಚಿಸಿದ್ದರು ಸಹ ಅನುಪಾಲನಾ ವರದಿಯನ್ನು ಸಲ್ಲಿಸದಿರುವುದನ್ನು ಗಮನಿಸಲಾಗಿದೆ.

ಪ್ರಸ್ತುತ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳ ಸ್ವಂತ/ಬಾಡಿಗೆ ಕಟ್ಟಡದಲ್ಲಿ ಅವಶ್ಯವಿರುವ ಸಂಖ್ಯೆಗೆ ಅನುಗುಣವಾಗಿ CCTV ಅಳವಡಿಸಲಾಗಿದೆಯೇ? ಈಗಾಗಲೇ ಅಳವಡಿಸಲಾಗಿರುವ CCTV ಯು ಸುಸ್ಥಿತಿಯಲ್ಲಿದೆಯೇ ಅಥವಾ ಹಾಳಾಗಿದ್ದಲ್ಲಿ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ? ಎಂಬ ವಿವರದ ಬಗ್ಗೆ ಅಧೀಕ್ಷಕರಿಗೆ ನೀಡಿದ ಸೂಚನೆಗಳ ಕುರಿತು ಪರಿಶೀಲಿಸುವುದು ಹಾಗೂ CCTV ಯು ಸುಸ್ಥಿತಿಯಲ್ಲಿರುವಂತೆ ಕ್ರಮವಹಿಸುವುದು.

ಮುಂದುವರೆದು, ಸಂಸ್ಥೆಗಳಲ್ಲಿ CCTV ಅಳವಡಿಸದೇ, ರಿಪೇರಿ ಮಾಡದೇ ಹಾಗೂ ಅಹಿತಕರ ಘಟನೆ ನಡೆದಾಗ CCTV Footage ಅಲಭ್ಯವಾದಲ್ಲಿ ಸಂಬಂಧಪಟ್ಟ ಸಂಸ್ಥೆಯ ಅಧೀಕ್ಷಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ರೀತಿಯ ಕ್ರಮಗಳಿಗೆ ಇನ್ನು ಮುಂದೆ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೇ ದಿನದ 24ಗಂಟೆಯೂ CCTV ಕಾರ್ಯನಿರ್ವಹಿಸುವಂತೆಯೂ ಹಾಗೂ CCTV ಕಾರ್ಯನಿರ್ವಹಣೆಯಲ್ಲಿ ದೋಷವಿದ್ದಲ್ಲಿ ಕೂಡಲೇ ಆಗಿಂದಾಗ್ಗೆ ದುರಸ್ಥಿಗೊಳಿಸಲು ಅನುವಾಗುವಂತೆ AMC ಮೂಲಕ ದುರಸ್ಥಿಗೆ ಅಗತ್ಯ ಕ್ರಮವಹಿಸುವುದು.

ಈ ಮೇಲಿನಂತೆ ಬಾಲನ್ಯಾಯ ಕಾಯ್ದೆಯಡಿ ನೋಂದಣಿಯಾಗಿರುವ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿಯೂ ಸಹಾ CCTV ಕಾರ್ಯನಿರ್ವಹಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕ್ರಮ ಕೈಗೊಳ್ಳುವುದು ಹಾಗೂ ಆಯಾ ಸಂಸ್ಥೆಯ ಮುಖ್ಯಸ್ಥರು/ಅಧೀಕ್ಷಕರು ಜವಾಬ್ದಾರಿಯಿಂದ CCTV Footage ಗಳನ್ನು ನೈಜ ಸಮಯದಲ್ಲಿ (real time) ಮೇಲುಸ್ತುವಾರಿ ಮಾಡುವಂತೆ

ಸೂಚಿಸುವುದು ಹಾಗೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರವಹಿಸುವುದು. ಖಾಸಗಿ ಮಕ್ಕಳ ಪಾಲನಾ ಕೇಂದ್ರಗಳಲ್ಲಿ CCTV ಕಾರ್ಯನಿರ್ವಹಣೆ ಬಗ್ಗೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಗಿಂದಾಗ್ಗೆ ಪರಿಶೀಲನೆ ಮಾಡಿ ನಿಯಮಿತವಾಗಿ ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದರೊಂದಿಗೆ, ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿಯೂ CCTV ಸುಸ್ಥಿತಿಯಲ್ಲಿದೆ ಎಂಬ ಬಗ್ಗೆ ಖಚಿತ ಪಡಿಸುವುದು.

ತಮ್ಮ ವಿಶ್ವಾಸಿ,

27.07.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

**ಪ್ರತಿಯನ್ನು:**

1. ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರಿಗೆ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಮೇಲಿನಂತೆ ಸೂಚಿಸಲು ತಿಳಿಸಿದೆ.
2. ಎಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಎಲ್ಲಾ ಅಧೀಕ್ಷಕರು, ಬಾಲಮಂದಿರ/ವೀಕ್ಷಣಾಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ.